**<u>ಅಸಲು ದಾವಾ ಸಂಖ್ಯೆ - 199/2019</u>** **ಪಿ.ಡಬ್ಲ್ಯೂ:-1**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ **02-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಸದರಿ ದಾವಾ ಆಸ್ತಿಗಳು ಮೂಲತಃ ಕುಳಗಟ್ಟೆಗ್ರಾಮದ ಹನುಮಂತ ದೇವರ ಆಸ್ತಿಗಳು ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಗೆ ಸರ್ಕಾರದಿಂದ ವೈಯಕ್ತಿಕ ಸಾಗುವಳಿ/ಅನುಭವ ಆಧಾರದ ಮೇಲೆ ಮಂಜೂರಾದಂತಹ ಆಸ್ತಿಗಳು ಎಂದರೆ ಸರಿಯಲ್ಲ. ಎಲ್ ಆರ್ ಎಫ್ ಪ್ರಕರಣ ನಂ.**65/74-75** ರಲ್ಲಿ ಕಲಂ **48** ಎ ಪ್ರಕಾರ **1** ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮತ್ತು ಮಕ್ಕಳು **4** ಜನರು ಅವಲಂಬಿತರು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು **1** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ವಿನಃ ಪಿತ್ರಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯು ದಿನಾಂಕ **12.03.1976** ರಲ್ಲಿ ಒಬ್ಬರೇ ಅನುಭವದಾರರಾಗಿದ್ದರಿಂದ ಸದರಿ ಜಮೀನಿಗೆ ಸಂಬಂಧ ಪಟ್ಟಂತೆ ಪ್ರೊಸಸಿಂಗ್ ಹಣವನ್ನು ಕಟ್ಟುವಂತೆ ನೋಟೀಸ್ ಬಂದಿರುತ್ತದೆ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಗೆ ದಾವಾ ಆಸ್ತಿಯ ವೈಯಕ್ತಿಕ ಸಾಗುವಳಿದಾರರಾಗಿದ್ದರಿಂದ ದಿನಾಂಕ **11.11.1976** ರಲ್ಲಿ ಎಲ್ ಆರ್ ಎಫ್ ಪ್ರಕರಣ ದಲ್ಲಿ ನೋಟೀಸ್ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ **15.04.1977** ಮತ್ತು **10.01.1978** ರಲ್ಲಿ **1** ನೇ ಪ್ರತಿವಾದಿಗೆ ದಾವಾ ಆಸ್ತಿಗಳಿಗೆ ಸಂಬಂದ ಪಟ್ಟಂತೆ ಸರ್ಕಾರಕ್ಕೆ ಹಣವನ್ನು ಪಾವತಿ ಮಾಡುವಂತೆ ನೋಟೀಸ್ ಬಂದ ಮೇರೆಗೆ **1** ನೇ ಪ್ರತಿವಾದಿಯು ತನ್ನಸ್ವಂತ ದುಡಿಮೆಯಿಂದ ಗಳಿಸಿದ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **248** ಮತ್ತು **258** ರಲ್ಲಿ

**1** ನೇ ಪ್ರತಿವಾದಿಯ ಚಿಕ್ಕಪ್ಪರಾದ ತಿಮ್ಮಯ್ಯರವರು ವೈಯಕ್ತಿಕ ಸಾಗುವಳಿದಾರರಾಗಿದ್ದರಿಂದ ಎಲ್ ಆರ್ ಎಫ್ ಪ್ರಕರಣ ನಂ.**65/74-75** ರಲ್ಲಿ **1** ನೇ ಪ್ರತಿವಾದಿಯು ಸಮ್ಮತಿ ಕೊಟ್ಟಿದ್ದರಿಂದ ದಿನಾಂಕ **10.02.1982** ರಲ್ಲಿ **1** ನೇ ಪ್ರತಿವಾದಿ ಮತ್ತು ಅವರ ಚಿಕ್ಕಪ್ಪ ತಿಮ್ಮಯ್ಯ ರವರಿಗೆ ಮರು ಮಂಜುರಾತಿ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ **10.02.1982** ರ ಮರು ಮಂಜೂರಾತಿ ಆದೇಶದ ಪ್ರಕಾರ ದಾವಾ ಆಸ್ತಿಗಳು **1** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

ಸರ್ವೇ ನಂಬರ್ **258** ರಲ್ಲಿ ದಿನಾಂಕ **22.03.1984** ರ ಸರ್ಕಾರದ ಆದೇಶದ **13/1983** ರಂತೆ ದುರ್ಬಲ ವರ್ಗದವರಿಗೆ ಮನೆ ಮತ್ತು ನಿವೇಶವನ್ನು ಭೂ ಸಂಗ್ರಹಣ ಕಾಯ್ದೆ ಅಡಿಯಲ್ಲಿ ಮಂಜೂರು ಮಾಡಲು ಆದೇಶವಾಗಿದ್ದು ಸದರಿ ಆದೇಶದಲ್ಲಿ **1** ಪ್ರತಿವಾದಿಗೆ ಮತ್ತು ಅವರ ಚಿಕ್ಕಪ್ಪ ತಿಮ್ಮಯ್ಯ ರವರಿಗೆ ಸೇರಿದ ತಲಾ **28** ಗುಂಟೆ ಜಮೀನನ್ನು ಸರ್ಕಾರದವರು ಭೂ ಸ್ವಾಧೀನವನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು **1** ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದರಿಂದ ಶಿವಮೊಗ್ಗ ಜಿಲ್ಲಾಧಿಕಾರಿಯವರು **06.12.1984** ರಂದು ನೋಟೀಸ್ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **258/ಪಿ1** ಒಟ್ಟು **4** ಎಕರೆ **33** ಗುಂಟೆ ಜಮೀನು ಇದ್ದು ಅದರಲ್ಲಿ ಸರ್ಕಾರದವರು **28** ಗುಂಟೆ ಜಮೀನನ್ನು ಭೂ ಸ್ವಾಧೀನ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ **14.03.1989** ರಂದು **1** ನೇ ಪ್ರತಿವಾದಿಯು ತನ್ನ ಸ್ವ ದುಡಿಮೆಯಿಂದ ಸಂಪಾದನೆ ಮಾಡಿದಂತಹ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿದ್ದಾರೆ ಎಂದರೇ ಸರಿಯಲ್ಲ. ದಿನಾಂಕ **30.09.1996** ರಂದು **1** ನೇ ಪ್ರತಿವಾದಿಗೆ ದಾವಾ ಆಸ್ತಿಗಳಿಗೆ ಸಂಬಂಧ ಪಟ್ಟಂತೆ ಪ್ರಿಮಿಯಮ್ ಮತ್ತು ಬಡ್ಡಿಯನ್ನು ಪಾವತಿ ಮಾಡದಿದ್ದ ಪಕ್ಷದಲ್ಲಿ ಸರ್ಕಾರವು ಸದರಿ ಜಮೀನುಗಳನ್ನು ಸರ್ಕಾರದವರು ವಾಪಸ್ಸು ಪಡೆದುಕೊಳ್ಳುತ್ತಾರೆ ನೋಟೀಸ್ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ **11.10.1996** ರಂದು **1** ನೇ ಪ್ರತಿವಾದಿಯು ದಾವಾ ಆಸ್ತಿಗಳು **2** ನೇ ಪ್ರಿಮಿಯಮ್ ಹಣವನ್ನು, ದಿನಾಂಕ **25.02.1997** ರಂದು **3** ನೇ ಪ್ರಿಮಿಯಮ್ ಹಣವನ್ನು, ದಿನಾಂಕ **26.08.1997** ರಂದು **4** ನೇ ಪ್ರಿಮಿಯಮ್

ಹಣವನ್ನು ಸರ್ಕಾರಕ್ಕೆ ತಮ್ಮ ಸ್ವಂತ ದುಡಿಮೆಯಿಂದ ಸಂಪಾದನೆ ಮಾಡಿದಂತಹ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೇ ನಂಬರ್ **248/ಪಿ1** ರಲ್ಲಿ ಒಟ್ಟು **3** ಎಕರೆ **15** ಗುಂಟೆ ಜಮೀನು ಇದ್ದು ಅದರಲ್ಲಿ **40X450** ಗೆ ಒಡ್ಡಿನ ಸರ ಅಥವಾ ಬಾವಿನ ಸರ ಕರಾಬ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **248/ಪಿ1** ರಲ್ಲಿ ಮೇಲೆ ಹೇಳಿದಂತೆ **40X450** ಅಡಿ ಜಾಗವು **1** ನೇ ಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ **258** ರಲ್ಲಿ **1** ನೇ ಪ್ರತಿವಾದಿಗೆ ಮತ್ತು ಅವರ ಚಿಕ್ಕಪ್ಪ ತಿಮ್ಮಯ್ಯ ರವರಿಗೆ ಸೇರಿದ ತಲಾ **30** ಗುಂಟೆ ಅಂದರೆ **1** ಎಕರೆ **20** ಗುಂಟೆ ಜಮೀನನ್ನು ಸರ್ಕಾರದವರು ಸುಮಾರು **50** ವರ್ಷಗಳ ಹಿಂದೆ ಶಾಲೆ, ಅಂಗನವಾಡಿ ಮತ್ತು ಇತರೆ ಸಾರ್ವಜನಿಕ ಕಟ್ಟಡಗಳ ನಿರ್ಮಾಣಕ್ಕಾಗಿ ಸರ್ಕಾರದವರು ಸ್ವಾದೀನ ಮಾಡಿಕೊಂಡು ಈಗ ಶಾಲೆ, ಅಂಗನವಾಡಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **258** ರಲ್ಲಿ ಒಟ್ಟು **4** ಎಕರೆ **33** ಗುಂಟೆ ಅದರಲ್ಲಿ ಸರ್ಕಾರದವರು **1** ಎಕರೆ **28** ಗುಂಟೆ ಜಮೀನನ್ನು ಸರ್ಕಾರದವರ ವಶದಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾನು ವೈಯಕ್ತಿಕವಾಗಿ ಮತ್ತು ಬೌದ್ಧಿಕವಾಗಿ ನೋಡಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ವೈಯಕ್ತಿಕವಾಗಿ ಪರಿಶೀಲನೆ ಮಾಡದೇ ನನ್ನ ತಾಯಿಯ ಮಾತು ಕೇಳಿಕೊಂಡು ಸರಿಯಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **258/ಪಿ1** ರ ಜಮೀನಿಗೆ ಲಗತ್ತಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ನಾಲ್ಕು ರಸ್ತೆಗಳು ಇವೆ ಎಂದರೇ ಸರಿಯಲ್ಲ. ಸರ್ವೇ ನಂಬರ್ **258** ರಲ್ಲಿ **5X200** ಅಡಿ ಉದ್ದ ಅಗಲದ ಚರಂಡಿಯನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ್ **258** ರಲ್ಲಿ **10X150** ಉದ್ದ ಅಗಲದ ಕಲ್ಲು ಕಟ್ಟಡದ ಚರಂಡಿಯನ್ನು ಸರ್ಕಾರದವನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಲ್ಲು ಕಟ್ಟಡದ ಚರಂಡಿಯ ಮೂಲಕ ಗ್ರಾಮದ ನೀರು, ಭದ್ರಾ ಚಾನಲ್ ನೀರು ಸದರಿ ಜಮೀನಿನಲ್ಲಿರುವ ಬಾವಿ ಸರಕ್ಕೆ ಸೇರುತ್ತದೆ ಎಂದರೆ ಸರಿಯಲ್ಲ. ಸದರಿ **5X200** ಅಡಿ ಮತ್ತು **10X150** ಅಡಿ ಉದ್ದ ಅಗಲದ ಚರಂಡಿ ಕಾಲ್ವೆ **1** ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇರುವುದಿಲ್ಲ

ಎಂದರೆ ಸರಿ. **20X400** ಅಡಿ ಉದ್ದ ಅಗಲದ ಸರ ಅಗಸರ ಮಹಾಂತೇಶಪ್ಪ ರವರ ಜಮೀನಿನ ಮೂಲೆಯಿಂದ ತಾರೆ ಮರದ ರಸ್ತೆಯವರೆಗೆ ಸರದ ಕರಾಬು ಸಹ **1** ನೇ ಪ್ರತಿವಾದಿಯ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.